# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ

**ಸಿ.ಸಿ ನಂ.388/2019**

ಪಿರ್ಯಾದಿಃ ಕರ್ನಾಟಕ ಸರ್ಕಾರ ಪರವಾಗಿ ಬಂಗಾರಪೇಟೆ ಪೊಲೀಸರು

– ವಿರುದ್ಧ –

ಆರೋಪಿಃ ಖದೀರ್ ಪಾಷ
ಬಿನ್ ಭಾಷಾ ಸಾಬ್
38 ವರ್ಷ, ಚಾಲಕ,
ವಾಸಃ ನಂ. 227, ನಂಜಪ್ಪ ಕಾಲೋನಿ ನಾಗವಾರ,
ಬೆಂಗಳೂರು

## ದೋಷಾರೋಪಣೆ

ಬಂಗಾರಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀ ಬಿ. ಕೇಶವಮೂರ್ತಿ, ಬಿ.ಎಲ್.ಎಲ್.ಬಿ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ದಿನಾಂಕಃ 13.04.2018 ರಂದು ಬೆಳಗ್ಗೆ ಸುಮಾರು 05.45 ಗಂಟೆಯಲ್ಲಿ ಚಾಸಾ–1 ರವರು ಬಂಗಾರಪೇಟೆ ಕಸಬಾ ಹೋಬಳಿ ಕಾಮಸಮುದ್ರ ರಸ್ತೆಯಲ್ಲಿನ ಪರವನಹಳ್ಳಿ ಗ್ರಾಮದಲ್ಲಿದ್ದಾಗ ಬಂಗಾರಪೇಟೆ ತಾಲ್ಲೂಕು ಕಛೇರಿ ಕಂಟ್ರೋಲ್ ರೂಂನಿಂದ ಚಾಸಾ–9 ರವರು ಬಂಗಾರಪೇಟೆ ಕೋಲಾರ ಮುಖ್ಯ ರಸ್ತೆಯ ಬೀರಂಡಹಳ್ಳಿ ಸಮೀಪದ ನಿರಾಶ್ರಿತರ ಪುನರ್ವಸತಿ ಕೇಂದ್ರದ ಹತ್ತಿರ ರಸ್ತೆಯಲ್ಲಿ 407 ಟೆಂಪೋ ಬಿದ್ದಿದೆ ಅದರಲ್ಲಿ ಅಕ್ಕಿ ಮೂಟೆ ಇರುವುದಾಗಿ ಬಂದ ಮಾಹಿತಿಯ ಮೇರೆಗೆ ಚಾಸಾ–1 ರಿಂದ 4 ರವರು ಸಂಜೆ 6.10 ಗಂಟೆ ಸಮಯದಲ್ಲಿ ಹೋಗಿ ನೋಡಿದಾಗ, ಆರೋಪಿಯಾದ ನಿಮಗೆ ಸೇರಿದ 407 ಟೆಂಪೋ ವಾಹನ ಸಂಖ್ಯೆಃ ಕೆಎ–40–834 ರ ವಾಹನದಲ್ಲಿ 50 ಕೆಜಿ ತೂಕದ 75 ಚೀಲದ ಅಕ್ಕಿ ಮೂಟೆಗಳು ಇದ್ದು, ಸದರಿ ಅಕ್ಕಿ ಮೂಟೆಗಳನ್ನು ಸ್ವಾಧೀನ ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಿಗೆ ಇಲ್ಲದೆ ಇರುವುದು ಕಂಡುಬಂದಿದ್ದು ಈ ಮೂಲಕ ನೀವು ಅಕ್ರಮವಾಗಿ ಅಕ್ಕಿ ಮೂಟೆಗಳನ್ನು ಸಾಗಾಣಿಕೆ ಮಾಡಿ ಕಲಂ 3 ಮತ್ತು 7 ಅಗತ್ಯ ವಸ್ತುಗಳ ಕಾಯ್ದೆ, 1955 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ಆಪಾದಿಸುತ್ತೇನೆ.

ಪ್ರಶ್ನೆ: 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ?

**ಉತ್ತರಃ**

ಪ್ರಶ್ನೆ: 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

**ಉತ್ತರಃ**

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ 05.01.2023

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,

ಬಂಗಾರಪೇಟೆ.